2. ಬೆಳಗಾಂ ನಗರದ ರೈಲ್ವೇ ಕ್ರಾಸಿಂಗ್‌ಗಳಲ್ಲಿ ಓವರ್ ಬ್ರಿಡ್ಜ್‌ಗಳನ್ನು ನಿರ್ಮಾಣ ಮಾಡುವ ಬಗ್ಗೆ.

SRI K.C. MODGEKAR DESAI (Bagewada) :- Belgaum is a district Headquarters and is a developing City. Due to heavy vehicular traffic, there are always traffic jams especially during the peak hours. The railway lines passing through the city cause much more inconvenience as the traffic has to pass through level crossings. This has put the general public to a lot of inconvenience. This also results in a lot of time consumption for Vehicular traffic on National Highway as well as other roads. To avoid this inconvenience, I request the Government to construct Fly-Over Bridges on the following railway crossing roads :

(1) Pune-Bangalore road on Dharwad Road; (2) Kapileshwar Road, Shahpur, Belgaum (3) Khanapur Road near third Gate, Tilakwadi, Belgaum, (4) Congress Road, First Gate, Tilakwadi, Belgaum.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಪರವಾಗಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಬೆಳಗಾವಿ ನಗರ ಪಾಲಿಕೆಯ ಪೂನಾ–ಬೆಂಗಳೂರು ರಸ್ತೆಯಲ್ಲಿ (ಧಾರವಾಡ ರಸ್ತೆ) ರೈಲ್ವೆ ಮೇಲು ಸೇತುವೆಯನ್ನು ಕಟ್ಟುವ ಯೋಜನೆಯು ನಗರ ಪಾಲಿಕೆ, ರೈಲ್ವೆ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗಳು ಒಟ್ಟಿಗೆ ಸೇರಿ ಕಾರ್ಯರೂಪಕ್ಕೆ ತರಬೇಕಾಗಿರುತ್ತದೆ. ಈ ಸೇತುವೆ ಕಟ್ಟುವ ಸಂಬಂಧ ಲೋಕೋಪಯೋಗಿ ಇಲಾಖೆ ಪ್ರಾರಂಭಿಕ ಹಂತಗಳನ್ನು ಕೈಗೊಳ್ಳಬೇಕಾಗಿದ್ದು, ಸದರಿ ಸೇತುವೆ ಕಟ್ಟಲು ನಗರ ಪಾಲಿಕೆ ಭೂಮಿ ಕೂಡ ಬೇಕಾಗಿರುತ್ತದೆ. ಈ ಯೋಜನೆಯ ಅಂದಾಜು ವೆಚ್ಚ ರೂ. 70 ಲಕ್ಷಗಳು. ಈ ಬಗ್ಗೆ ಯಾವ ಇಲಾಖೆಯ ಆಯವ್ಯಯಗಳಲ್ಲಿ ಹಣವನ್ನು ಒದಗಿಸಿರುವುದಿಲ್ಲ. ಆದುದರಿಂದ ಈ ಯೋಜನೆ ಕಾರ್ಯಗತವಾಗಿರುವುದಿಲ್ಲ.

ಕಪಿಲೇಶ್ವರ ರಸ್ತೆಯ ಶಹಾಪುರ, ಬೆಳಗಾವಿ ಇಲ್ಲಿ ರೈಲ್ವೆ ಸೇತುವೆ ಕಟ್ಟುವ ವಿಷಯ, ಬೆಳಗಾವಿ ನಗರ ಪಾಲಿಕೆಯಿಂದ ಅನುಮೋದಿಸಲ್ಪಟ್ಟಿದೆ. ಈ ಯೋಜನೆಯ ಲೋಕೋಪಯೋಗಿ ಇಲಾಖೆ, ರೈಲ್ವೆ ಇಲಾಖೆ ಮತ್ತು ನಗರ ಪಾಲಿಕೆಯು ಜಂಟಿಯಾಗಿ ಕಾರ್ಯಗತ ಮಾಡಬೇಕಾಗಿರುತ್ತದೆ. ಯೋಜನಾ ಇಲಾಖೆಯ ಆಕ್ಷೇಪಣೆಯಿಂದ ಲೋಕೋಪಯೋಗಿ ಇಲಾಖೆಯ ಈ ಯೋಜನೆಯನ್ನು ಆಯವ್ಯಯದಲ್ಲಿ ಸೇರಿಸಿರುವುದಿಲ್ಲ.

ಬೆಳಗಾವಿಯ ಖಾನಾಪುರ ರಸ್ತೆ ಟಿಳಕವಾಡಿಯ ಮೂರನೇ ಗೇಟಿನ ಹತ್ತಿರ ರೈಲ್ವೆ ಮೇಲು ಸೇತುವೆ ಕಟ್ಟಬೇಕಾಗಿರುವ ಹಾಗೂ ಬೆಳಗಾವಿಯ ಕಾಂಗ್ರೆಸ್ ರಸ್ತೆ, ಟಿಳಕವಾಡಿ ಬಳಿ ರೈಲ್ವೆ ಮೇಲು ಸೇತುವೆ ಕಟ್ಟುವ ಯಾವುದೇ ಪ್ರಸ್ತಾವನೆ ಈ ಯೋಜನೆಯಲ್ಲಿ ಇರುವುದಿಲ್ಲ. ಈ ಬಗ್ಗೆ ನಗರ ಪಾಲಿಕೆಯಾಗಲಿ ಲೋಕೋಪಯೋಗಿ ಇಲಾಖೆಯಾಗಲಿ ಯಾವ ಪ್ರಾರಂಭಿಕ ಕಾರ್ಯಗಳನ್ನು ಹಮ್ಮಿಕೊಂಡಿರುವುದಿಲ್ಲ.

3. ಬೆಂಗಳೂರು ನಗರದ ಶ್ರೀರಾಮಪುರದಲ್ಲಿರುವ ಬಲ್ಕ್ ವೆಂಡಿಂಗ್ ಬೂತ್ 318ರ ಎಜೆನ್ಸಿ ರದ್ದುಪಡಿಸಿ ಬೇರೆಯವರಿಗೆ ಕೊಡುವ ಬಗ್ಗೆ.

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) :– ಮಾನ್ಯ ಉಪಾಧ್ಯಕ್ಷೆಣೀಯವರೆ, ಬೆಂಗಳೂರು ನಗರದ ಶ್ರೀರಾಮಪುರದಲ್ಲಿರುವ ಬಲ್ಕ್‌ವೆಂಡಿಂಗ್ ಬೂತ್ ನಂ. 318ರಲ್ಲಿ ಕಳೆದ 2–3 ವರ್ಷಗಳಿಂದ ಕಲಬೆರಕೆ ಹಾಲನ್ನು ಮಾರಾಟ ಮಾಡುತ್ತಿರುತ್ತಾರೆ. ಇದರ ಹಲವಾರು ಬಾರೀ ದೂರನ್ನು ಸಲ್ಲಿಸಲಾಗಿದೆ. ಮದರ್ ಡೈರಿಯವರೂ ಕೂಡ ಕಲಬೆರಕೆ ಪ್ರಕರಣಗಳಿಗಾಗಿ ಹಲವಾರು ಬಾರಿ ನೋಟೀಸುಗಳನ್ನು ನೀಡಲಾಗಿದ್ದರೂ ಇದುವರೆವಿಗೂ ಈ ಬೂತಿನ ಎಜನ್ಸಿಯನ್ನು ರದ್ದುಪಡಿಸಲು ಕೆ.ಎಂ.ಎಫ್. ನವರು ಯಾವುದೇ ಕ್ರಮಕೈಗೊಂಡಿಲ್ಲ. ಇದರಿಂದಾಗಿ ಅಲ್ಲಿನ ಜನತೆಗೆ ತುಂಬಾ ಅನಾನುಕೂಲವಾಗುತ್ತಿರುವುದರಿಂದ ಕೂಡಲೇ ಈ ಬೂತಿನ ಏಜೆನ್ಸಿಯನ್ನು ರದ್ದುಪಡಿಸಿ